KACM010001992016

Presented on : 07-01-2016
Registered on : 07-01-2016

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**SPL.C/1/2016**

Complainant(PROSECUTION):
State by- Karnataka Lokayuktha Police, Chikkamagaluru.

**VERSUS**

Accused:
Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, No. Nasiravadi Village, Kasaba Hobli, Alanda Taluk, Kalaburgi District.

---

State Complainant}: Spl. Public Prosecutor,
Sri. K.S.SHANTHIPRAKASH appearing for Sri. Channabasappa

---

**Offence punishable under : U/Sec.13(1)(E)r/w13(2)ofPCAct1988. of PREVENTION OF CORRUPTION ACT,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**Spl.C No: 1/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಿಶೋರ್ ಆರ್ ಖಂಡೇಲಾಲ್ | ಪ್ರಾ.ಸಾ.- 36 |
| ತಂದೆಯ ಹೆಸರು | : | ರಾಮ್ ವಿಲಾಸ್ ಖಂಡೇಲಾಲ್ | ಚಾ.ಸಾ.- 87 |
| ವಯಸ್ಸು | : | 61 ವರ್ಷ | |
| ಉದ್ಯೋಗ | : | Tours and Travels ಮಾಲೀಕರು, ಯಾದಗಿರಿ | |
| ವಾಸ ಸ್ಥಳ | : | ಯಾದಗಿರಿ | |

ದಿನಾಂಕ: **11-09-2025**

<u>ವಿ.ಸಿ.ಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>(ಯಾದಗಿರಿಯಲ್ಲಿರುವ **Tours and Travels** ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ರಂಜಿತಾ ಅವರು ಆ ರಿಮೋಟ್ ಪಾಯಿಂಟ್ ನಲ್ಲಿಕೋ ಆರ್ಡಿನೇಟರ್ ಎಂದು ಇದ್ದಾರೆ).</u>

<u>ಮುಖ್ಯ ವಿಚಾರಣೆಃ ಶ್ರೀ ವಿ.ಟಿ.ಟಿ. -ವಿಶೇಷ ಪಿ.ಪಿ. ಯವರಿಂದಃ</u>

1. 2007 ರಿಂದ ನಾನು Tours and Travels ನಡೆಸುತ್ತಿದ್ದು, ಟಿಕೆಟ್ ಗಳನ್ನು ಬುಕ್ ಮಾಡುವ ಕೆಲಸ ಮಾಡುತ್ತಿದ್ದೇನೆ.

2. ಈಗ್ಗೆ 10 ವರ್ಷಗಳ ಹಿಂದೆ ಲೋಕಾಯುಕ್ತ ಕಛೇರಿಯಿಂದ ಚನ್ನಬಸಪ್ಪ ಅಂದರೆ ಆರೋಪಿಯು ನಮ್ಮ Tours and Travels ನಲ್ಲಿ ಟಿಕೆಟ್ ಬುಕ್ ಮಾಡಿದ್ದರ ಬಗ್ಗೆ ಕೇಳಿದ್ದರು. ನಾನು ಹೌದು ಟಿಕೆಟ್ ಬುಕ್ ಮಾಡಿ ಕೊಟ್ಟಿದ್ದೆದ್ದೆನು ಎಂದು ಹೇಳಿದ್ದೆನು. ಈ ಬಗ್ಗೆ ಲೋಕಾಯುಕ್ತ ಪೊಲೀಸರು ಕನ್ನಡದಲ್ಲಿ ಒಂದು ಪತ್ರ ಬರೆದುಕೊಂಡು ಬಂದಿದ್ದು, ನನಗೆ ಕನ್ನಡ ಓದಲು , ಬರೆಯಲು ಬರುವುದಿಲ್ಲ, ನಾನು ಸದರಿ ಪತ್ರದಲ್ಲಿ ಸಹಿ ಮಾಡಿ ಕಳುಹಿಸಿದ್ದೇನೆ. ಸಾಕ್ಷಿಗೆ ಸದರಿ ಪತ್ರವನ್ನು ವಿಸಿ ಮೂಲಕ ತೋರಿಸಿದ್ದು, ಸಾಕ್ಷಿಯು ಸಹಿ ತನ್ನದೆಂದು ಗುರುತಿಸಿರುತ್ತಾರೆ. ಸದರಿ ದಾಖಲೆ ಖರ್ಚು ಪುಸ್ತಕದ ಪುಟ ಸಂ. 864 ರಲ್ಲಿ ಇದ್ದು, ನಿ.ಪಿ. 110 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಕೆ ಎಸ್ ಎಸ್ ಪಿ ವಕೀಲರಿಂದಃ</u>

3. Tours and Travels ನಡೆಸುತ್ತಿದ್ದ ಬಗ್ಗೆ ಲೈಸೆನ್ಸ್ ಪಡೆದಿದ್ದೇನೆ. ಲೈಸೆನ್ಸ್ ಕಾಪಿಯನ್ನು ಪೊಲೀಸರಿಗೆ ಕೊಟ್ಟಿಲ್ಲ. ಸಾಕ್ಷಿ ಮುಂದುವರಿದು ಸ್ವತಃ ನುಡಿದಿದ್ದಾರೆ ಟಿಕೆಟ್ ಮೇಲೆಯೇ ನಮ್ಮ ಟ್ರಾವೆಲ್ಸಿನ ಲೈಸೆನ್ಸ್ ನಂಬರ್ ನಮೂದಾಗುತ್ತದೆ ಎಂದು ಹೇಳಿರುತ್ತಾರೆ.

4. Tours and Travels ನಲ್ಲಿ ಬಹಳಷ್ಟು ಜನರು ಟಿಕೆಟ್ ಬುಕ್ ಮಾಡಿಸಲು ಬರುತ್ತಿದ್ದರಿಂದ ನನಗೆ ಇಂತಹವರೇ ಬಂದಿದ್ದರು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ನಿ.ಪಿ.110 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯು ಕನ್ನಡದಲ್ಲಿ ಬರೆದಿದ್ದು, ಪೊಲೀಸರು ಏನು ಬರೆದಿದೆ ಎಂದು ನನಗೆ ಓದಿ ಹೇಳಿ ನನ್ನ ಸಹಿ ಪಡೆದುಕೊಂಡು ಹೋಗಿದ್ದಾರೆ ಎಂದು ಹೇಳುತ್ತಾರೆ.

5. ಯಾವ ವರ್ಷ, ಯಾವ ತಿಂಗಳು, ಯಾವ ದಿನಾಂಕಂದು ಟಿಕೆಟ್ ಬುಕ್ ಮಾಡಿದ್ದಾರೆಂದು ತಮಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಈಗ್ಗೆ 10/12 ವರ್ಷಗಳಾಗಿದ್ದರಿಂದ ಹೇಳಲು ಆಗುವುದಿಲ್ಲ ಎಂದು ಹೇಳಿರುತ್ತಾರೆ.

6. ನಿ.ಪಿ.110 ರ ದಾಖಲೆಯಲ್ಲಿ ಟಿಕೆಟ್ ನಂಬರನ್ನು ನಮೂದು ಮಾಡಿದ್ದಾರೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಪೊಲೀಸರ ಶಿಫಾರಸ್ಸಿನ ಮೇರೆಗೆ ನಾನು ಟಿಕೆಟ್ ಬುಕ್ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-11-09-2025

(ರಾಜೇಶ್ವರಿ ಎನ್ ಹೆಗಡೆ )

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಕೋ-ಆರ್ಡಿನೇಟರ್ ಸಹಿಃ -

Visit **ecourts.gov.in** for updates or download mobile app “**eCourts Services**” from Android or iOS